# ಕರ್ನಾಟಕ ಕೃಷಿ ಮಾರಾಟ ನೀತಿ 2013



(ಸರ್ಕಾರದ ಆದೇಶ ಸಂಖ್ಯೆ: ಸಇ 143 ಎಂಆರ್‌ಇ 2013 (ಭಾಗ-1) ದಿನಾಂಕ 04-09-2013ರಂತೆ ಅನುಮೋದಿಸಿದೆ)

ಸಹಕಾರ ಇಲಾಖೆ

ಕರ್ನಾಟಕ ಸರ್ಕಾರ

# ಕರ್ನಾಟಕ ಕೃಷಿ ಮಾರಾಟ ನೀತಿ 2013

## 1. ಹಿನ್ನೆಲೆ:-

1.1. ಕರ್ನಾಟಕವು ನಿಯಂತ್ರಿತ ಮಾರುಕಟ್ಟೆಗಳ ಧೀರ್ಘ ಇತಿಹಾಸವನ್ನು ಹೊಂದಿದ್ದು, ರಾಷ್ಟ್ರದ ವಿವಿಧ ರಾಜ್ಯಗಳು ನಿಯಂತ್ರಿತ ಮಾರುಕಟ್ಟೆಗಳ ಬಗ್ಗೆ ಯೋಚಿಸುವುದಕ್ಕಿಂತ ಮೊದಲೇ ಕಾರ್ಯಾಚರಣೆಯನ್ನು ಪ್ರಾರಂಭಿಸಿದೆ. ರಾಜ್ಯಗಳ ಪುನರ್ ವಿಂಗಡಣೆ ನಂತರದಲ್ಲಿ ಕೃಷಿ ಮಾರುಕಟ್ಟೆ ಪ್ರಾಮುಖ್ಯತೆಯನ್ನು ಮನಗಂಡು ಕರ್ನಾಟಕ ಶಾಸನ ಸಭೆಯು ಕರ್ನಾಟಕ ಕೃಷಿ ಉತ್ಪನ್ನ ಮಾರಾಟ(ನಿಯಂತ್ರಣ ಮತ್ತು ಅಭಿವೃದ್ಧಿ) ಅಧಿನಿಯಮ, 1966ರ ಕಾಯ್ದೆಯನ್ನು ರಚಿಸಿ, ದಿನಾಂಕ: 01/05/1968 ರಿಂದ ಜಾರಿಗೆ ತರಲಾಗಿದೆ. ಕೃಷಿ ಉತ್ಪನ್ನಗಳ ಮಾರಾಟದಲ್ಲಿ ಸುಧಾರಿತ ನಿಯಂತ್ರಣ ವ್ಯವಸ್ಥೆ, ಸಮರ್ಥ ಮಾರಾಟ ವ್ಯವಸ್ಥೆಯ ಅಭಿವೃದ್ಧಿ, ಕೃಷಿ ಸಂಸ್ಕರಣೆಗೆ ಹಾಗೂ ರಫ್ತಿಗೆ ಉತೇಜನ ಹಾಗೂ ಮಾರುಕಟ್ಟೆಗಳ ಸ್ಥಾಪನೆ ಹಾಗೂ ಅವುಗಳ ನಿರ್ವಹಣೆ ಬಗ್ಗೆ ಕಾಯ್ದೆಯಲ್ಲಿ ಸೂಕ್ತ ಅವಕಾಶಗಳನ್ನು ಮಾಡಲಾಗಿದೆ. ಈ ಅಧಿನಿಯಮವು ರಾಜ್ಯದಲ್ಲಿ ಕೃಷಿ ಉತ್ಪನ್ನಗಳ ಮಾರಾಟಕ್ಕಾಗಿ ಪರಿಣಾಮಕಾರಿ ಮೂಲ ಸೌಕರ್ಯ ವ್ಯವಸ್ಥೆ ಮತ್ತು ಸೂಕ್ತ ವಿಧಿವಿಧಾನಗಳನ್ನು ಹಾಗೂ ಪದ್ಧತಿಯನ್ನು ವ್ಯವಸ್ಥೆಗೊಳಿಸಿದೆ.

1.2. ಸ್ವಾತಂತ್ರ ನಂತರದಲ್ಲಿ ರಾಷ್ಟ್ರದಲ್ಲಿ ಹಾಗೂ ರಾಜ್ಯದಲ್ಲಿ ಕೃಷಿ ಮಾರುಕಟ್ಟೆ ಕ್ಷೇತ್ರದಲ್ಲಿ ಆಗಾಧವಾದ ಬದಲಾವಣೆ ಹಾಗೂ ಬೆಳವಣಿಗೆಯಾಗಿರುತ್ತದೆ. ಇದಕ್ಕೆ, ವಿವಿಧ ಕೃಷಿ ಉತ್ಪನ್ನಗಳ ತಳಿಗಳು ಹಾಗೂ ಉತ್ಪಾದನಾ ಪ್ರಮಾಣದಲ್ಲಿ ಹೆಚ್ಚಳವಾಗಿರುವುದು, ಉತ್ಪನ್ನದ ಮಾರಲರ್ಹ ಪ್ರಮಾಣದ ಹೆಚ್ಚಳ, ಸಮಾಜದಲ್ಲಿನ ಕೃಷಿ ಉತ್ಪನ್ನಗಳ ಉಪಯೋಗದ ಬಳಕೆ ಪದ್ದತಿಯಲ್ಲಿನ ಬದಲಾವಣೆಗಳು, ಅಂತರರಾಷ್ಟ್ರೀಯ ಮಾರುಕಟ್ಟೆಯೊಂದಿಗೆ ಸಂಪರ್ಕ ಮುಂತಾದ ಅಂಶಗಳು ಕಾರಣವಾಗಿರುತ್ತವೆ. ಆದ್ದರಿಂದ ರಾಜ್ಯದಲ್ಲಿ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳು ಕಾರ್ಯನಿರ್ವಹಿಸುವ ವಿಧಾನ ಹಾಗೂ ಇತರೆ ಉತ್ಪನ್ನದ ಬೆಲೆ ನಿರ್ಧರಣೆ ಮೇಲೆ ಪರಿಣಾಮ ಬೀರುವ ಅಂಶಗಳನ್ನು ಹೊಸದಾಗಿ ಅರ್ಥೈಸಬೇಕಾಗಿದೆ ಮತ್ತು ಇದಕ್ಕೆ ತಕ್ಕಂತೆ ವ್ಯವಸ್ಥೆ ಮಾಡಬೇಕಾಗಿದೆ.

1.3. ಮೇಲಿನ ಅಂಶಗಳ ಜೊತೆಗೆ ಬದಲಾಗುತ್ತಿರುವ ತಂತ್ರಜ್ಞಾನದಿಂದ, ಪ್ರಮುಖವಾಗಿ ಮಾಹಿತಿ ಮತ್ತು ಸಂಪರ್ಕ ತಂತ್ರಜ್ಞಾನಗಳ ಬದಲಾವಣೆಗಳಿಂದಾಗಿ ಕೆಲವು ವರ್ಷಗಳ ಹಿಂದೆ ಸಾಧ್ಯತೆ ಇಲ್ಲದಂತಹ ಅಂಶಗಳು ಪ್ರಸ್ತುತ ಸಾಧ್ಯಗೊಳಿಸಲು ಶಕ್ತವಾಗಿವೆ. ಮಾರುಕಟ್ಟೆ ಕಾರ್ಯಕರ್ತರು ಹಾಗೂ ಭಾಗೀದಾರರು ಮಾರುಕಟ್ಟೆಯ ಮೇಲಿಟ್ಟಿರುವ ಹೆಚ್ಚಿನ ನಿರೀಕ್ಷೆ ಹಾಗೂ ಅಪೇಕ್ಷೆಯೂ ಸಹ ಈ ಮಾರುಕಟ್ಟೆಗಳನ್ನು ಸಂಘಟಿಸುವ ಹಾಗೂ ನಿರ್ವಹಣೆ ಮಾಡಬೇಕಾದ ವಿಧಾನಗಳ ಮೇಲೆ ಅತ್ಯಂತ ಹೆಚ್ಚಿನ ಪ್ರಭಾವ ಬೀರಿವೆ. ಕೊನೆಯದಾಗಿ ಹಾಗೂ ಪ್ರಮುಖವಾಗಿ ರಾಷ್ಟ್ರದಲ್ಲಿ ಆರ್ಥಿಕ ನಿರ್ವಹಣೆ ಕುರಿತು ಅನುಸರಿಸಬೇಕಾದ ಆರ್ಥಿಕ ತತ್ವಜ್ಞಾನದ ಕುರಿತ ಹೊಸ ಆಲೋಚನೆಗಳು ಪ್ರಗತಿಗಾಗಿ ಹಾಗೂ ಕೃಷಿ ಕ್ಷೇತ್ರದ ಬೆಳವಣಿಗೆಗೆ ಉತ್ತೇಜನ ನೀಡುವ ಪುನರಾವಲೋಕನ ಮಾಡಿದ ಕೃಷಿ ಮಾರಾಟ ನೀತಿಯನ್ನು ರಾಜ್ಯದಲ್ಲಿ ಅಳವಡಿಸುವ ಅವಶ್ಯಕತೆ ಇದೆ.

1.4. ಪೂರಕವಾದ ಕಾನೂನು ವ್ಯವಸ್ಥೆ, ಮೂಲ ಸೌಕರ್ಯಗಳಲ್ಲಿ ಬಂಡವಾಳ ತೊಡಗಿಸುವುದು ಮತ್ತು ರಾಜ್ಯದಾದ್ಯಂತ ವಿಸ್ತರಿಸಲ್ಪಟ್ಟ ಉತ್ತಮ ರೀತಿಯಲ್ಲಿ ಕಾರ್ಯನಿರ್ವಹಿಸುವ ಮಾರುಕಟ್ಟೆಗಳು, ರೈತರು ತಮ್ಮ ಹೆಚ್ಚಿನ ಉತ್ಪನ್ನಗಳನ್ನು ಮಾರಾಟ ಮಾಡಲು ಸಮಂಜಸವಾದ ವ್ಯವಸ್ಥೆಯನ್ನು ಕಲ್ಪಿಸಿವೆ. ಕರ್ನಾಟಕ ಕೃಷಿ ಉತ್ಪನ್ನ ಮಾರಾಟ (ನಿಯಂತ್ರಣ ಮತ್ತು ಅಭಿವೃದ್ಧಿ) ಅಧಿನಿಯಮ 1966ನ್ನು 2007ರಲ್ಲಿ ಪುನಃ ತಿದ್ದುಪಡಿ ಮಾಡಿ ನೇರ ಖರೀದಿ ಕೇಂದ್ರಗಳ ಸ್ಥಾಪನೆ, ಖಾಸಗಿ ಮಾರುಕಟ್ಟೆಗಳ ಸ್ಥಾಪನೆ, ರೈತ ಗ್ರಾಹಕ ಮಾರುಕಟ್ಟೆಗಳ ಸ್ಥಾಪನೆ, ಒಪ್ಪಂದ ಕೃಷಿ, ಸ್ಪಾಟ್ ಎಕ್ಸ್‌ಛೇಂಜಗಳ ಸ್ಥಾಪನೆ ಮುಂತಾದವುಗಳಿಗೆ ಅವಕಾಶ ಕಲ್ಪಿಸಲಾಗಿದೆ. ಆದರೆ, ಈ ತಿದ್ದುಪಡಿಗಳನ್ನು ಬೆಂಬಲಿಸುವ ವಿಸ್ತ್ರತವಾದ ನೀತಿಯ ಕೊರತೆಯಿಂದಾಗಿ ರೈತಸ್ನೇಹಿಯಾದ ಇಂತಹ ಹಲವು ಕ್ರಮಗಳು ಸಾರ್ಥಕ ರೀತಿಯಲ್ಲಿ ರೂಪುಗೊಂಡಿರುವುದಿಲ್ಲ. ಆದ್ದರಿಂದ, ಪ್ರಸ್ತುತ ಈ ಕ್ಷೇತ್ರಕ್ಕೆ ಅನ್ವಯವಾಗುವ ನೀತಿಯ ಪುನರ್ ಪರಿಶೀಲನೆ ಅವಶ್ಯಕವೆಂಬುದನ್ನು ಸರ್ಕಾರವು ಮನಗಂಡಿರುತ್ತದೆ.

1.5. ಮೇಲ್ಕಂಡ ಅಂಶಗಳ ಮೇರೆಗೆ, ಕೃಷಿ ಮಾರಾಟ ನೀತಿಯು ಈ ರಂಗದಲ್ಲಿ ಸವಾಲಾಗಿ ಪರಿಗಣಿಸಿರುವ ಸಮಸ್ಯೆಗಳ ಪರಿಹಾರಕ್ಕಾಗಿ ರೂಪಿಸಲ್ಪಟ್ಟಿದೆ. ಪ್ರಮುಖವಾಗಿ ಸಣ್ಣ ಜಮೀನಿನ ಒಡೆತನ ಹಾಗೂ ಅದರಿಂದಾಗಿ ಕಡಿಮೆ ಪ್ರಮಾಣದ ಮಾರಲರ್ಹವಾದ ಉತ್ಪನ್ನಗಳ ಲಭ್ಯತೆ, ಋತುಮಾನಾಧಾರಿತ ಪೂರೈಕೆಯ ನಿರ್ವಹಣೆ ಮತ್ತು ವರ್ಷ ಪೂರ್ತಿ ಬೇಡಿಕೆಗೆ ಅನುಗುಣವಾಗಿ ಕೊಯ್ಲು ನಂತರದಲ್ಲಿ ಏಕಕಾಲದಲ್ಲಿ ಅಪಾರ ಪ್ರಮಾಣದ ಕೃಷಿ ಉತ್ಪನ್ನಗಳು ಮಾರುಕಟ್ಟೆಗೆ ಆವಕವಾಗುವುದರ ನಿರ್ವಹಣೆ, ಬೆಳೆದ ಉತ್ಪನ್ನಗಳನ್ನು ಮಾರುಕಟ್ಟೆಗಳಿಗೆ ಮಾರಾಟಕ್ಕಾಗಿ ಭೌತಿಕವಾಗಿ ಸಾಗಾಣಿಕೆ ಮಾಡುವ ಪರಿಸ್ಥಿತಿ, ಕೊಯ್ಲು ನಂತರದ ಗಣನೀಯ ನಷ್ಟ, ರೈತರು ಹಾಗೂ ಇತರೆ ಮಾರುಕಟ್ಟೆ ಭಾಗೀದಾರರಿಗೆ ಕ್ರಮಬದ್ಧ ಹಣಕಾಸು ಮೂಲಗಳ ಕೊರತೆ, ಈ ಕ್ಷೇತ್ರದಲ್ಲಿನ ಸಮಸ್ಯೆಗಳ ನಿವಾರಣೆ ಮಾಡುವ ಅಂಶಗಳನ್ನು ಕೃಷಿ ಮಾರಾಟ ನೀತಿಯು ಒಳಗೊಂಡಿದೆ. ಅದಕ್ಕಿಂತ ಹೆಚ್ಚಾಗಿ ಸ್ಪರ್ಧೆಯ ಹೆಚ್ಚಳ, ರೈತರಿಗೆ ಉತ್ತಮ ಬೆಲೆ ದೊರೆಕಿಸುವುದು, ಉಗ್ರಾಣ ನಿರ್ಮಾಣದ ಮೂಲಸೌಕರ್ಯಕ್ಕಾಗಿ ಬಂಡವಾಳ ಹೂಡಿಕೆಗೆ ಪ್ರೋತ್ಸಾಹ, ಗುಣ ಪರೀಕ್ಷೆ ಮತ್ತು ವರ್ಗೀಕರಣ ಸೌಲಭ್ಯಗಳು, ಶೀಥಲಗೃಹಗಳು, ಆಹಾರ ಸಂಸ್ಕರಣೆ ಮುಂತಾದ ಕ್ಷೇತ್ರಗಳಲ್ಲಿಯು ಉತ್ತೇಜಿಸುವುದು ಈ ನೀತಿಯ ಅಂಶವಾಗಿದೆ. ಗ್ರಾಮೀಣ ಭಾಗದಲ್ಲಿ ಉದ್ಯೋಗಾವಕಾಶಗಳನ್ನು ಸೃಷ್ಟಿಸಲು ಕೃಷಿ ಮಾರಾಟ ಕ್ಷೇತ್ರವನ್ನು ಹೆಚ್ಚು ಆಕರ್ಷಕಗೊಳಿಸುವುದರ ಮೂಲಕ ರಾಜ್ಯದ ಸಮಗ್ರ ಬೆಳವಣಿಗೆಗೆ ಪೂರಕವಾಗುವುದು.

## 2. ಉದ್ದೇಶ:–

2.1. ಕೃಷಿ ಮಾರಾಟ ನೀತಿಯ ಒಟ್ಟಾರೆ ಉದ್ದೇಶವು ಉತ್ತಮವಾದ ಮಾರುಕಟ್ಟೆ ವ್ಯವಸ್ಥೆಯನ್ನು ರೂಪಿಸಿ, ಅದರಲ್ಲಿ ಪಾರದರ್ಶಕತೆ ಹಾಗೂ ಸಮಾನತೆ, ಉತ್ಪನ್ನಗಳ ಗುಣಮಟ್ಟ ಮತ್ತು ಭಿನ್ನತೆ ಗುರುತಿಸುವಿಕೆ, ಮಾರುಕಟ್ಟೆಯ ಎಲ್ಲಾ ಭಾಗೀದಾರರಿಗೆ ಮಾರುಕಟ್ಟೆ ಕುರಿತಾದ ಮಾಹಿತಿಯ ಪ್ರಸರಣದ ಮೂಲಕ ವಹಿವಾಟಿನಲ್ಲಿ ಸಮಾನವಾಗಿ ತೊಡಗಿಸಿಕೊಳ್ಳಲು ಅವಕಾಶ ಕಲ್ಪಿಸುವ, ಮಾರುಕಟ್ಟೆಯ ಚಟುವಟಿಕೆಗಳಲ್ಲಿ ಭಾಗವಹಿಸುವ ಎಲ್ಲರಿಗೂ ಸುಲಭವಾಗಿ ಪ್ರವೇಶ ಮತ್ತು ಯೋಗ್ಯ ಪ್ರತಿಫಲ ದೊರೆಯುವ, ಮಾರಾಟಗಾರರಿಗೆ ತಮ್ಮ ಉತ್ಪನ್ನಗಳನ್ನು ಮಾರಾಟ ಮಾಡಲು ತಮ್ಮದೇ ನಿರ್ಧಾರಕ್ಕೆ ಒಳಪಡುವ ಸಮಯ, ಸ್ಥಳ ಹಾಗೂ ವಿಧಾನಗಳ ಆಯ್ಕೆ ದೊರೆಯುವಂತೆ ಸಮಗ್ರ ಮಾರುಕಟ್ಟೆ ವ್ಯವಸ್ಥೆ ರೂಪಿಸುವುದು ಆಗಿರುತ್ತದೆ.

2.2. ಮಾರುಕಟ್ಟೆ ಚಟುವಟಿಕೆಯಲ್ಲಿ ಭಾಗವಹಿಸುವುದಕ್ಕೆ ಇರುವ ಅಡೆತಡೆಗಳ ನಿವಾರಣೆ ಅಥವಾ ಅವುಗಳನ್ನು ಕಡಿಮೆಗೊಳಿಸುವುದರ ಮೂಲಕ ಹೆಚ್ಚಿನ ಸ್ಪರ್ಧೆ ಮತ್ತು ಸಮರ್ಥ ಬೆಲೆ ನಿರ್ಧರಣೆ, ರಾಜ್ಯದಲ್ಲಿನ ಪ್ರಾಥಮಿಕ ಮಾರುಕಟ್ಟೆಗಳನ್ನು ರಾಷ್ಟ್ರೀಯ ಮಾರುಕಟ್ಟೆಗಳೊಂದಿಗೆ ಜೋಡಿಸುವುದರ ಮೂಲಕ ಮಾರಾಟ ಸರಪಳಿಯಲ್ಲಿರುವ ಎಲ್ಲಾ ಭಾಗೀದಾರರಿಗೆ ನ್ಯಾಯಯುತ ಪ್ರತಿಫಲ ದೊರೆಯುವಂತೆ ಮಾಡುವುದು.

2.3. ರೈತರು ಮಾರಾಟ ಮಾಡಿದಾಗ ಅಥವಾ ನಂತರ ಖರೀದಿದಾರರು ಮಾರಾಟ ಮಾಡಿದಾಗ ಹಣ ಪಾವತಿ ಮತ್ತು ವ್ಯವಹಾರ ಪೂರ್ಣಗೊಳಿಸುವಲ್ಲಿ ಇರುವ ತೊಂದರೆಗಳನ್ನು ತಂತ್ರಜ್ಞಾನ ಪರಿಹಾರದ ಮೂಲಕ ಅಥವಾ ಹಣಕಾಸು ಸಂಸ್ಥೆಗಳೊಂದಿಗೆ ಜೋಡಣೆ ಮಾಡುವ ಸೂಕ್ತ ಸಾಧನೆಗಳ ಮೂಲಕ ನಿವಾರಿಸುವುದು.

2.4. ಸ್ಥಳೀಯ, ಪ್ರಾದೇಶಿಕ ಹಾಗೂ ಅಂತರಾಷ್ಟ್ರೀಯ ಮಾರುಕಟ್ಟೆಗಳಲ್ಲಿ ಹೆಚ್ಚುತ್ತಿರುವ ಹಾಗೂ ಬದಲಾಗುತ್ತಿರುವ ಉತ್ಪನ್ನಗಳ ಬೇಡಿಕೆಗೆ ಅನುಗುಣವಾಗಿ ಪ್ರತಿಕ್ರಿಯಿಸಲು ವರ್ಗೀಕರಣ, ಪ್ಯಾಕೇಜಿಂಗ್ ಮುಂತಾದ ಪ್ರಾಥಮಿಕ ಮೌಲ್ಯವರ್ಧಿತ ಸೇವೆಗಳನ್ನು ನೀಡಲು ಗ್ರಾಮೀಣ ಮಟ್ಟದಲ್ಲಿ ರೈತರ ಸ್ವಸಹಾಯ ಗುಂಪುಗಳು, ಸಂಘಗಳು, ಸಂಘಟನೆಗಳು, ಉತ್ಪಾದಕರ ಕಂಪನಿಗಳು ಹಾಗೂ ಇವುಗಳ ಸ್ಥಾಪನೆಗೆ ಪ್ರೋತ್ಸಾಹಿಸುವುದು, ಉತ್ತೇಜನ ನೀಡುವ ಮೂಲಕ ಕ್ರಮ ವಹಿಸಲಾಗುವುದು. ಉತ್ತಮ ಹಾಗೂ ಯೋಗ್ಯ ಧಾರಣೆ ದೊರೆಯಲು ಗುಣಮಟ್ಟ ಕಾಪಾಡಿಕೊಳ್ಳುವುದರ ಕುರಿತು ತಿಳುವಳಿಕೆ ಹಾಗೂ ಜಾಗೃತಿ ಮೂಡಿಸುವುದು.

2.5. ಮಾರುಕಟ್ಟೆಯಲ್ಲಿನ ಎಲ್ಲಾ ಆಸಕ್ತದಾರರ ಕೌಶಲ್ಯತೆ ಮಟ್ಟವನ್ನು ಉತ್ತಮ ರೀತಿಯಲ್ಲಿ ಸಾಮರ್ಥ್ಯವೃದ್ಧಿ ಪ್ರಯತ್ನಗಳ ಮೂಲಕ ಹೆಚ್ಚಿಸಲು ಕ್ರಮ ವಹಿಸಲಾಗುವುದು. ಪ್ರಾಥಮಿಕ ಹಂತದಲ್ಲಿ ಮೌಲ್ಯವರ್ಧಿತ ಸೇವೆಗಳನ್ನು ಕೈಗೊಳ್ಳುವುದರಿಂದ ದಾಸ್ತಾನು ಮಾಡುವಲ್ಲಿ ಅನುಸರಿಸಬೇಕಾದ ಆಧುನಿಕ ಪದ್ದತಿಗಳು, ಸಂಸ್ಕರಣೆ ಮಾಡುವುದರಿಂದ ಆಗುವ ಲಾಭಗಳು, ಇತ್ಯಾದಿ ಸುಧಾರಿತ ಕ್ರಮಗಳ ಕುರಿತು, ಎಲ್ಲಾ ಆಸಕ್ತದಾರರ ತಿಳುವಳಿಕೆ ಮಟ್ಟ ಹೆಚ್ಚಿಸಲು ಸರ್ಕಾರದ ವತಿಯಿಂದ ಸಕ್ರಿಯವಾದ ಕ್ರಮ ಕೈಗೊಳ್ಳುವುದು.

2.6. ಮಾರುಕಟ್ಟೆಯಲ್ಲಿ ಎಲ್ಲಾ ಭಾಗೀದಾರರಿಗೆ ಹಣಕಾಸು ಸಂಪರ್ಕ ಸುಧಾರಿಸುವುದು. ಉತ್ಪನ್ನಗಳ ವೈಜ್ಞಾನಿಕ ದಾಸ್ತಾನು ಹಾಗೂ ಸಂರಕ್ಷಣೆ, ಮಾರುಕಟ್ಟೆ ಸಂಪರ್ಕಿಸಲು ಅಗತ್ಯವಾಗುವ ಸೌಕರ್ಯಗಳ ನಿರ್ಮಾಣಕ್ಕಾಗಿ ಬಂಡವಾಳ ಹೂಡಿಕೆಯನ್ನು ಪ್ರೋತ್ಸಾಹಿಸುವುದು ಮತ್ತು ಪ್ರಾಥಮಿಕ ಹಂತದಲ್ಲಿ ಉತ್ಪನ್ನಗಳ ಮೌಲ್ಯವರ್ಧನೆಗೆ ಅವಕಾಶಿಸುವುದು.

2.7. ಉತ್ಪನ್ನಗಳ ಮಾರಾಟದಲ್ಲಿ ಸವಾಲುಗಳನ್ನು ಎದುರಿಸುವುದಕ್ಕಾಗಿ ರೈತರು ಉತ್ಪನ್ನಗಳನ್ನು ಸಂಗ್ರಹಿಸಿ ಮಾರಾಟ ಮಾಡುವ ಹಾಗೂ ಅವರ ಮಾರಾಟ ಸಾಮರ್ಥ್ಯವನ್ನು ಹೆಚ್ಚಿಸಲು ಸ್ವಸಹಾಯ ಗುಂಪುಗಳು ಹಾಗೂ ಸಹಕಾರ ಸಂಸ್ಥೆಗಳನ್ನು ಪೋಷಿಸುವುದು. ಮಾರಾಟದಲ್ಲಿನ ಸವಾಲುಗಳನ್ನು ಸಮರ್ಥವಾಗಿ ನಿರ್ವಹಿಸಲು ಎಲ್ಲಾ ಭಾಗೀದಾರರಿಗೆ ಉತ್ತಮ ಸೌಲಭ್ಯಗಳನ್ನು ಕೊಡುವುದಕ್ಕಾಗಿ ಹಾಲಿ ಇರುವ ಸಂಸ್ಥೆಗಳನ್ನು ಬಲಪಡಿಸುವುದು ಹಾಗೂ ಹೊಸ ಸಂಸ್ಥೆಗಳ ರಚನೆಗೆ ಪ್ರೋತ್ಸಾಹಿಸುವುದು.

2.8. ಎಲ್ಲಾ ಭಾಗೀದಾರರಿಗೆ ಪ್ರಯೋಜನವಾಗುವಂತೆ ಸಾರ್ವಜನಿಕ ಹಾಗೂ ಖಾಸಗಿ ಪ್ರಯತ್ನಗಳಿಗಾಗಿ ಕಾರ್ಯನಿರ್ವಹಣಾ ಹಂತಕ್ಕಿಂತ ಭಿನ್ನವಾದ ಪ್ರಗತಿಪರ ನಿಯಂತ್ರಣಾತ್ಮಕ ವಾತಾವರಣವನ್ನು ನಿರ್ಮಿಸುವುದು.

2.9. ಈ ನೀತಿಯ ಉದ್ದೇಶಗಳನ್ನು ಈಡೇರಿಸುವುದಕ್ಕಾಗಿ ಮಾರುಕಟ್ಟೆಗಳ ಸಮರ್ಥ ನಿರ್ವಹಣೆಗಾಗಿ ಎಲ್ಲಾ ಹಂತಗಳಲ್ಲಿ ತಂತ್ರಜ್ಞಾನವನ್ನು ಅಳವಡಿಸಿ ನಿರ್ವಹಿಸುವುದು ಪ್ರಮುಖವಾಗಿರುತ್ತದೆ.

2.10. ರೈತರ ಹಿತರಕ್ಷಣೆ ಮಾಡುವುದಕ್ಕಾಗಿ ಕರ್ನಾಟಕ ಕೃಷಿ ಉತ್ಪನ್ನ ಮಾರಾಟ (ನಿಯಂತ್ರಣ ಮತ್ತು ಅಭಿವೃದ್ಧಿ) ಅಧಿನಿಯಮ, 1966ರಲ್ಲಿಯ ಎಲ್ಲ ರೈತಸ್ನೇಹಿ ನಿಯಮಗಳನ್ನು ಅನುಷ್ಠಾನಗೊಳಿಸಲಾಗುವುದು.

ಮೇಲಿನ ಉದ್ದೇಶಗಳ ಸಾಫಲ್ಯಗೊಳಿಸುವಿಕೆಗೆ ಸಂಬಂಧಿಸಿದಂತೆ ಸರ್ಕಾರವು ಕೈಗೊಳ್ಳುವ ಪ್ರಮುಖ ಕ್ರಮಗಳು ಕೆಳಗಿನಂತಿವೆ.

## 3. ನೀತಿ ನಿರೂಪಣಾ ಕ್ರಮಗಳು:-

### 3.1. ನಿಯಂತ್ರಿತ ಮಾರುಕಟ್ಟೆಗಳು:

ಎ) ರಾಜ್ಯದಲ್ಲಿ ಕಾರ್ಯನಿರ್ವಹಿಸುತ್ತಿರುವ ನಿಯಂತ್ರಿತ ಮಾರುಕಟ್ಟೆಗಳಲ್ಲಿ ವ್ಯಾಪಕ ವಿದ್ಯುನ್ಮಾನ ಹರಾಜು ಪದ್ಧತಿಯನ್ನು ಜಾರಿಗೆ ತರುವುದಕ್ಕಾಗಿ ಅಗತ್ಯವಾಗುವ ತಾಂತ್ರಿಕ ಕೌಶಲ್ಯವನ್ನು ಅಳವಡಿಸಿಕೊಳ್ಳುವುದು ಹಾಗೂ ತನ್ಮೂಲಕ ಪಾರದರ್ಶಕವಾಗಿ ಬೆಲೆ ನಿಗಧಿಪಡಿಸುವಿಕೆಗೆ ಪೂರಕವಾಗುವುದು.

ಬಿ) ರಾಜ್ಯಾದ್ಯಂತ ವಿವಿಧ ನಿಯಂತ್ರಿತ ಮಾರುಕಟ್ಟೆಗಳು ಹಾಗೂ ಗೋದಾಮುಗಳನ್ನು ಜೋಡಣೆ ಮಾಡುವುದರ ಮೂಲಕ ಕಾರ್ಯತಃ ಮಾರುಕಟ್ಟೆ ಕಾರ್ಯನಿರ್ವಹಣೆಗೆ ಅವಕಾಶಿಸುವುದು ಹಾಗೂ ಸದರಿ ಮಾರುಕಟ್ಟೆಗಳಲ್ಲಿ ಉತ್ಪನ್ನಗಳ ವರ್ಗೀಕರಣ ಹಾಗೂ ಪೂರಕ ಸೌಕರ್ಯಗಳನ್ನು ಕಲ್ಪಿಸುವುದು.

### 3.2. ಸ್ಪರ್ಧೆಯನ್ನು ಹೆಚ್ಚಿಸುವುದು:

ಎ) ತಕ್ಷಣದ ಕ್ರಮವಾಗಿ ಲೈಸೆನ್ಸ್ ನೀಡಿಕೆಯಲ್ಲಿನ ಪದ್ಧತಿಗಳನ್ನು ಸರಳೀಕರಣಗೊಳಿಸುವುದು ಹಾಗೂ ಮಾರುಕಟ್ಟೆ ಭಾಗೀದಾರರಿಗೆ ಏಕೀಕೃತ ಲೈಸೆನ್ಸ್ ನೀಡಲು ಕ್ರಮವಹಿಸುವುದು.

ಬಿ) ಕೃಷಿ ಉತ್ಪನ್ನಗಳ ಹರಾಜು ಪ್ರಕ್ರಿಯೆಯಲ್ಲಿ ಹೆಚ್ಚಿನ ಭಾಗವಹಿಸುವಿಕೆಗೆ ಇರುವ ಅಡೆತಡೆಗಳನ್ನು ತೆಗೆದು ಹಾಕಿ ಹೆಚ್ಚಿನ ಸ್ಪರ್ಧಾತ್ಮಕ ವಾತಾವರಣ ನಿರ್ಮಿಸುವುದು.

ಸಿ) ಲೈಸೆನ್ಸ್ ನೀಡುವಿಕೆಗೆ ಸಂಬಂಧಿಸಿದಂತೆ ಆಡಳಿತಾತ್ಮಕ ವಿಧಿ-ವಿಧಾನಗಳನ್ನು ಸರಳೀಕರಣಗೊಳಿಸುವುದು ಹಾಗೂ ದಕ್ಷತೆ ತರಲು ಗಣಕೀಕರಣ ವ್ಯವಸ್ಥೆಗೊಳಿಸುವುದು.

### 3.3 ಖಾಸಗಿ ಮಾರುಕಟ್ಟೆಗಳು:

ಎ) ಖಾಸಗಿ ಮಾರುಕಟ್ಟೆಗಳು ಜೋಡಿಸಲ್ಪಟ್ಟಿರುವ ಮಾರುಕಟ್ಟೆ ವ್ಯವಸ್ಥೆಯ ಅಂಗವಾಗಿರುವುದರ ಜೊತೆಗೆ ಕೃಷಿ ಉತ್ಪನ್ನಗಳ ಮಾರಾಟಕ್ಕೆ ಸೌಲಭ್ಯ ಕಲ್ಪಿಸುವ ಬದಲಿ ವ್ಯವಸ್ಥೆಯಾಗಿ ಸಮಾನ ಅವಕಾಶವನ್ನು ನೀಡಿ ಪ್ರೋತ್ಸಾಹ ನೀಡುವುದು.

ಬಿ) ರೈತರು ಹಾಗೂ ಇತರೆ ಭಾಗೀದಾರರು ತಮಗೆ ಸೂಕ್ತವಾದ ರಾಜ್ಯದಲ್ಲಿನ ಯಾವುದೇ ನಿಯಂತ್ರಿತ ಅಥವಾ ಖಾಸಗಿ ಮಾರುಕಟ್ಟೆಗಳಲ್ಲಿ ಮಾರಾಟ ಅಥವಾ ಖರೀದಿ ಮಾಡಲು ಆಯ್ಕೆಗೆ ಅವಕಾಶ ಕಲ್ಪಿಸುವುದು.

ಸಿ) ಖಾಸಗಿ ಮಾರುಕಟ್ಟೆಗಳು ಹಾಗೂ ನಿಯಂತ್ರಿತ ಮಾರುಕಟ್ಟೆಗಳು ರೈತರಿಗೆ ಹಾಗೂ ಮಾರುಕಟ್ಟೆ ಕಾರ್ಯಕರ್ತರಿಗೆ ಸೇವೆಗಳನ್ನು ಒದಗಿಸುವ ನಿಟ್ಟಿನಲ್ಲಿ ಸ್ಪರ್ಧಾತ್ಮಕವಾಗಿ ಕಾರ್ಯನಿರ್ವಹಿಸುವವು.

## 3.4. ಬೇಡಿಕೆ ಹೆಚ್ಚಿಸಲು ಗುಣ ಪ್ರಮಾಣಗಳನ್ನು ನಿಗಧಿಪಡಿಸುವುದು:

ಎ) ವಿವಿಧ ಕೃಷಿ ಉತ್ಪನ್ನಗಳ ಗುಣಮಟ್ಟ ನಿರ್ಧರಣೆಗೆ ಮಾನದಂಡಗಳನ್ನು ರೂಪಿಸುವುದು, ಮಾದರಿ ತೆಗೆಯುವುದು ಮತ್ತು ಉತ್ಪನ್ನದ ಗುಣ ಪರೀಕ್ಷೆ ಮಾಡುವುದಕ್ಕಾಗಿ ಮಾರುಕಟ್ಟೆಗಳಲ್ಲಿ ಹಾಗೂ ಗೋದಾಮುಗಳಲ್ಲಿ ಅಗತ್ಯವಾಗುವ ಸೌಕರ್ಯಗಳನ್ನು ಒದಗಿಸುವುದು, ತನ್ಮೂಲಕ ಗುಣಮಟ್ಟ ಆಧಾರಿತ ಉತ್ಪನ್ನಗಳ ವ್ಯಾಪಾರವನ್ನು ಪ್ರೋತ್ಸಾಹಿಸುವುದು.

ಬಿ) ಸ್ಥಳೀಯ, ಪ್ರಾದೇಶಿಕ ಹಾಗೂ ಅಂತರಾಷ್ಟ್ರೀಯ ಮಾರುಕಟ್ಟೆಗಳಲ್ಲಿ ಗುಣಮಟ್ಟದ ಉತ್ಪನ್ನಗಳಿಗೆ ಬೇಡಿಕೆ ಹೆಚ್ಚಿಸುವುದಕ್ಕಾಗಿ ಉತ್ಪನ್ನಗಳ ಗುಣಮಟ್ಟ ನಿರ್ಧರಣೆ ಹಾಗೂ ಅದರ ಅಗತ್ಯತೆ ಬಗ್ಗೆ ತಿಳುವಳಿಕೆ ಮೂಡಿಸುವುದರ ಮೂಲಕ ಭಾಗೀದಾರರ ಸಾಮಥ್ಯ ಹೆಚ್ಚಿಸುವ ಕ್ರಮ ಕೈಗೊಳ್ಳುವುದು.

## 3.5. ರೈತರ ಸಬಲೀಕರಣ:

ಎ) ರೈತರು ತಮ್ಮ ಉತ್ಪನ್ನಗಳಿಗೆ ಉತ್ತಮ ಬೆಲೆ ಪಡೆಯುವ ಸಾಮರ್ಥ್ಯವನ್ನು ಹೆಚ್ಚಿಸುವುದಕ್ಕಾಗಿ ಮತ್ತು ಉತ್ಪನ್ನಗಳನ್ನು ಗ್ರಾಹಕರು, ಸಂಸ್ಕರಣಗಾರರು ಮತ್ತು ರಫ್ತುದಾರರಿಗೆ ನೇರವಾಗಿ ಮಾರಾಟ ಮಾಡುವ ಮುಖಾಂತರ ವಿವಿಧ ಮಾರಾಟ ಹಂತಗಳನ್ನು ಕಡಿಮೆಗೊಳಿಸುವುದು, ಗ್ರಾಮೀಣ ಹಂತದಲ್ಲಿ ಉತ್ಪನ್ನಗಳನ್ನು ಒಟ್ಟುಗೂಡಿಸಿ ಪ್ರಾಥಮಿಕ ಮೌಲ್ಯವರ್ಧನೆ ಮಾಡುವುದಕ್ಕಾಗಿ ರೈತರ ಗುಂಪುಗಳನ್ನು ಪ್ರೋತ್ಸಾಹಿಸುವುದು.

ಬಿ) ದಾಸ್ತಾನು ಮಳಿಗೆಗಳಿಗೆ ಮಾನ್ಯತೆ ನೀಡಿ ಅಧಿಕೃತಗೊಳಿಸುವ ಮೂಲಕ ಉತ್ಪನ್ನಗಳಿಗೆ ಒದಲಿ ಹಾಗೂ ಸುರಕ್ಷಿತ ದಾಸ್ತಾನು ಸೌಲಭ್ಯವನ್ನು ಒದಗಿಸುವುದು, ಮತ್ತು ಈ ಅಧಿಕೃತ ದಾಸ್ತಾನು ಮಳಿಗೆಗಳ ಮೂಲಕ ರೈತರು ತಮ್ಮ ಉತ್ಪನ್ನಗಳನ್ನು ಮಾರಾಟ ಮಾಡಲು ಉಗ್ರಾಣಾಧಾರಿತ ಮಾರಾಟವನ್ನು ಉತ್ತೇಜಿಸುವುದು.

ಸಿ) ರೈತರು ಹತಾಶರಾಗಿ ಉತ್ಪನ್ನಗಳನ್ನು ಮಾರಾಟ ಮಾಡುವುದನ್ನು ತಪ್ಪಿಸಲು ರೈತರಿಗೆ ಅಡಮಾನ ಸಾಲ ಸೌಲಭ್ಯವನ್ನು ಒದಗಿಸುವುದು ಹಾಗೂ ಇದಕ್ಕಾಗಿ ಪೂರಕವಾದ ವಾತಾವರಣವನ್ನು ನಿರ್ಮಿಸುವುದು.

ಡಿ) ರೈತರು ತಮ್ಮ ಉತ್ಪನ್ನಗಳನ್ನು ಮಾರಾಟ ಮಾಡುವ ನಿರ್ಧಾರ ಕೈಗೊಳ್ಳುವ ಪೂರ್ವದಲ್ಲಿಯೇ ಉತ್ಪನ್ನಗಳಿಗೆ ಮಾರುಕಟ್ಟೆಗಳಲ್ಲಿ ಪ್ರಚಲಿತವಿರುವ ಬೆಲೆಯ ವಿವರಗಳನ್ನು ಪಡೆಯುವುದಕ್ಕಾಗಿ ಪರಿಣಾಮಕಾರಿಯಾಗಿ ಮಾರುಕಟ್ಟೆ ಬೆಲೆಯ ಮಾಹಿತಿಯನ್ನು ಪ್ರಸಾರ ಮಾಡುವುದು.

ಇ) ರೈತರ ಖಾತೆಗೆ ಸಕಾಲದಲ್ಲಿ ಆನ್‌ಲೈನ್ ಮೂಲಕ ತಕ್ಷಣವೇ ಹಣ ಪಾವತಿಯಾಗುವಂತೆ ಮಾಡುವುದು ಹಾಗೂ ಈ ವಿಧಾನವನ್ನು ಸರಳೀಕರಣಗೊಳಿಸುವುದು.

ಎಫ್)ರೈತರು ತಮ್ಮ ಉತ್ಪನ್ನಗಳನ್ನು ಯಾವ ಬೆಲೆಯಲ್ಲಿ ಯಾವ ಸಂದರ್ಭದಲ್ಲಿ ಮಾರಾಟ ಮಾಡಬೇಕು ಎಂಬುದನ್ನು ನಿರ್ಧರಿಸುವ ಹಾಗೂ ಖರೀದಿದಾರರು ನೀಡಿದ ಬೆಲೆಯನ್ನು ತಿರಸ್ಕರಿಸುವ ಅವಕಾಶ ಕಲ್ಪಿಸುವುದು

## 3.6. ಮಾರುಕಟ್ಟೆ ಅಭಿವೃದ್ಧಿ:-

ಎ) ಸರ್ಕಾರವು ಸಾರ್ವಜನಿಕ – ಖಾಸಗಿ ಸಹಭಾಗಿತ್ವದ ಮೂಲಕ ಕೃಷಿ ಉತ್ಪನ್ನಗಳ ಮಾರಾಟಕ್ಕಾಗಿ ಅಗತ್ಯವಾಗುವ ನವೀನ ತಾಂತ್ರಿಕತೆ ಹಾಗೂ ಪೂರಕ ಸೌಲಭ್ಯಗಳನ್ನು ಒದಗಿಸುವುದು.

ಬಿ) ಮಾರುಕಟ್ಟೆಯ ಎಲ್ಲಾ ಭಾಗೀದಾರರ ಪ್ರಯೋಜನಕ್ಕಾಗಿ ದಕ್ಷ ಹಾಗೂ ಪರಿಣಾಮಕಾರಿಯಾದ ಕೃಷಿ ಮಾರಾಟ ಮಾಹಿತಿ ಜಾಲ ಮತ್ತು ನಂಬಲರ್ಹ ಮಾಹಿತಿ ಪ್ರಸಾರ ವ್ಯವಸ್ಥೆಯನ್ನು ಅಭಿವೃದ್ಧಿಗೊಳಿಸಲು ಸಹಕರಿಸುವುದು.

ಸಿ) ಉತ್ಪನ್ನಗಳಿಗೆ ಉತ್ತಮ ಧಾರಣೆ ದೊರೆಯಲು ರಾಜ್ಯದಲ್ಲಿ ಮಾರುಕಟ್ಟೆ ಭಾಗೀದಾರರು ಭಾಗವಹಿಸುವುದಕ್ಕಾಗಿ ಆಯ್ದ ಕೃಷಿ ಉತ್ಪನ್ನಗಳಿಗೆ ದ್ವಿತೀಯ ಹಂತದ ಮಾರುಕಟ್ಟೆಗಳೊಂದಿಗೆ ಜೋಡಣೆ ಕಲ್ಪಿಸುವುದು, ರೈತರ ಕಂಪೆನಿಗಳನ್ನು ಪ್ರೋತ್ಸಾಹಿಸುವುದು ಹಾಗೂ ರೈತರ ಉತ್ಪನ್ನಗಳನ್ನು ಕ್ರೋಢೀಕರಿಸುವುದು.

ಡಿ) ರೈತರು ಹಾಗೂ ಇನ್ನಿತರೆ ಮಾರಾಟ ಭಾಗೀದಾರರಿಗೆ ಅಡಮಾನ ಸಾಲ ಸೌಲಭ್ಯ ಒದಗಿಸಲು ರೇಖಾತೀತವಾಗಿ ಹಣಪಾವತಿ ಮತ್ತು ನಂತರದ ಪ್ರಕ್ರಿಯೆಗಳನ್ನು ಪೂರೈಸಲು ಹಣಕಾಸು ಸಂಸ್ಥೆಗಳೊಂದಿಗೆ ಜೋಡಣೆಯನ್ನು ಮಾಡುವುದು.

ಇ) ಖರೀದಿದಾರರು ಹಣ ಪಾವತಿಸುವಲ್ಲಿ ವಿಫಲರಾದಲ್ಲಿ, ಅಲ್ಲದೆ ದಲ್ಲಾಲರು, ಗುಣ ಪರೀಕ್ಷಕರು ಅಥವಾ ಇನ್ನಾವುದೇ ಮಾರಾಟ ಭಾಗೀದಾರರಲ್ಲಿ ವ್ಯಾಜ್ಯ ಉಂಟಾದಾಗ್ಯೂ, ರೈತರಿಗೆ ಸಕಾಲದಲ್ಲಿ ಆನ್‌ಲೈನ್ ಮೂಲಕ ಹಣ ಪಾವತಿಯಾಗುವಂತೆ ಎಲ್ಲ ಸುರಕ್ಷಣಾ ಕ್ರಮಗಳನ್ನು ಕೈಗೊಳ್ಳುವುದು.

## 3.7. ಒಪ್ಪಂದ ಕೃಷಿ:

ಎ) ರಾಜ್ಯದಲ್ಲಿ ಒಪ್ಪಂದ ಕೃಷಿಯನ್ನು ಪ್ರೋತ್ಸಾಹಿಸುವುದು ಮತ್ತು ಒಪ್ಪಂದ ಕೃಷಿಯಲ್ಲಿನ ಖರೀದಿದಾರರು ಏಕ ಹಂತದಲ್ಲಿ ನೋಂದಣಿ ಮಾಡಲು ಅವಕಾಶ ನೀಡಿ ನೋಂದಣಿ ಅಧಿಕಾರಿಗಳಿಂದ ಸಕಾಲದಲ್ಲಿ ವ್ಯಾಜ್ಯ ತೀರ್ಮಾನವಾಗುವಂತೆ ವಿಧಿ ವಿಧಾನಗಳನ್ನು ರೂಪಿಸುವುದು.

## 3.8. ಮೂಲಭೂತ ಸೌಕರ್ಯಗಳು:

ಎ) ಪ್ರಮುಖ ಹಾಗೂ ಅವಶ್ಯಕವಾದ ಕೃಷಿ ಮಾರಾಟ ಮೂಲಭೂತ ಸೌಕರ್ಯಗಳನ್ನು ಅಭಿವೃದ್ಧಿಪಡಿಸುವುದು.

ಬಿ) ಕೃಷಿ ಮಾರಾಟದಲ್ಲಿ ಮೂಲಭೂತ ಸೌಲಭ್ಯಗಳಿಗಾಗಿ ಭಂಡವಾಳ ತೊಡಗಿಸಲು ಖಾಸಗಿ ಮತ್ತು ಇತರೆ ಭಾಗೀದಾರರಿಗೆ ಸೂಕ್ತ ಪ್ರೋತ್ಸಾಹದೊಂದಿಗೆ ಪೂರಕವಾದ ಮತ್ತು ಅನುಕೂಲಕರವಾದ ವಾತಾವರಣವನ್ನು ಸರ್ಕಾರವು ನಿರ್ಮಿಸುವುದು.

## 3.9. ನಿಯಂತ್ರಣಾತ್ಮಕ ಹಾಗೂ ಶಾಸನಾತ್ಮಕ ಕ್ರಮಗಳು:

ಎ) ರಾಜ್ಯದಲ್ಲಿ ಪಾರದರ್ಶಕ ಮತ್ತು ಸಮರ್ಥ ಕೃಷಿ ಮಾರುಕಟ್ಟೆಗಳ ಕಾರ್ಯನಿರ್ವಹಣೆಗಾಗಿ ವಿಶಿಷ್ಟವಾದ ಎಲ್ಲರಿಗೂ ಸಮಾನ ಅವಕಾಶ ಇರುವ ನಿಯಂತ್ರಣ ವಾತಾವರಣವನ್ನು ನಿರ್ಮಿಸುವುದಕ್ಕಾಗಿ ಮತ್ತು ಮೇಲೆ ತಿಳಿಸಿದಂತಹ ನೀತಿಯ ಉದ್ದೇಶಗಳನ್ನು ಮತ್ತು ಕ್ರಮಗಳನ್ನು ಜಾರಿಗೆ ತರುವುದಕ್ಕಾಗಿ ಕರ್ನಾಟಕ ಕೃಷಿ ಉತ್ಪನ್ನ ಮಾರಾಟ (ನಿಯಂತ್ರಣ ಮತ್ತು ಅಭಿವೃದ್ಧಿ) ಅಧಿನಿಯಮ 1966ನ್ನು ಪುನರ್ ಪರಿಶೀಲಿಸುವುದು.

ಕರ್ನಾಟಕ ಕೃಷಿ ಮಾರಾಟ ನೀತಿ 2013

ಸಹಕಾರ ಇಲಾಖೆ
ಕರ್ನಾಟಕ ಸರ್ಕಾರ